**CC 153/2017**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 153/2017

**ಸಿ ಡಬ್ಲೂ** 9

**ಪಿ ಡಬ್ಲೂಃ** 8

**ಸಾಕ್ಷಿಯ ಹೆಸರು -** **ಮಹಾಂತೇಶ ಕುಮಾರ**
**ತಂದೆಯ ಹೆಸರು -** **ಲೇಟ್ ಒಂಕಾರಪ್ಪ**
**ವಯಸ್ಸು -** 42 **ವರ್ಷಗಳು**
**ಉದ್ಯೋಗ -** **ಮುಖ್ಯ ಪೇದೆ ಎಚ್ ಬಿ ಹಳ್ಳಿ ಪೋಲಿಸ ಠಾಣೆ**
**ವಾಸಸ್ಥಳ -** **ಎಚ್ ಬಿ ಹಳ್ಳಿ**

**ಸಾಕ್ಷಿಯನ್ನು ದಿನಾಂಕಃ** 27-11-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು **2015** ರಿಂದ **2020** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **25-09-2016** ರಂದು ಈ ಪ್ರಕರಣದಲ್ಲಿ ಚಾಸಾ **-10** ರವರು ನನ್ನನ್ನು ತನಿಖಾ ಸಹಾಯಕವಾಗಿ ನೇಮಿಸಿಕೊಂಡಿದ್ದರು. ಈ ಪ್ರಕರಣದ ಕೃತ್ಯ ಸ್ಥಳವಾದ ಹೊಸಪೇಟೆ ಬಸ್ ನಿಲ್ದಾಣದ ಎಡಭಾಗದಲ್ಲಿರುವ ಡಾ. ಸಿದ್ದಿಕಿ ರವರ ಸೋನಿ ಹಲ್ಲಿನ ಆಸ್ಪತ್ರೆಗೆ ತನಿಕಾಧಿಕಾರಿಯೊಂದಗೆ ಭೇಟಿ ನೀಡಿದ್ದೆ. ಸ್ಥಳಕ್ಕೆ ತನಿಖಾದಿಕಾರಿಯ ಸೂಚನೆಯಂತೆ ಚಾಸಾ **-2** ಮತ್ತು **3** ರವರನ್ನು ಪಂಚರಾಗಿ ಸಹಕರಿಸಲು ಕರೆದುಕೊಂಡು ಬಂದಿದ್ದೆ. ಚಾಸಾ **-10** ರವರು ಚಾಸಾ **-1** ರವರು ತೋರಿಸಿದ ಸ್ಥಳದಲ್ಲಿ ಮಾಡಿರುತ್ತಾರೆ. ಪಂಚನಾಮೆಯನ್ನು ಮಧ್ಯಾಹ್ನ **01.00** ರಿಂದ **2.00** ಗಂಟೆಯವರಿಗೆ ನಾನೇ ಬರೆದಿರುತ್ತೇನೆ. ಸಾಕ್ಷಿ ನಿಪಿಃ **2** ರ ಪಂಚನಾಮೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸಹಿಯನ್ನು ನಿಪಿಃ **2(ಡಿ)** ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ **3** ರ ಪೋಟೊಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿದಾರರು ನೀಡಿದ್ದ ಹೇಳಿಕೆಗಳನ್ನು ಠಾಣೆಯ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿರುತ್ತೇನೆ. ತನಿಖಾ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿರುತೆತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಆರ್ ವಕೀಲರಿಂದ**

ಪಂಚರಿಗೆ ಲಿಖಿತ ನೋಟಿಸ್ ನೀಡಲಾಗಿತ್ತು. ಪಂಚರನ್ನು ಕರೆಯಲು ಮಧ್ಯಾಹ್ನ 12.55 ಗಂಟೆಗೆ ಹೋಗಿದ್ದೆ. ಕೃತ್ಯ ಸ್ಥಳದ ಅಕ್ಕಪಕ್ಕ ಮೇಡಿಕಲ್ ಸ್ಟೋರ್ ಮತ್ತು ಇತರೆ ಅಂಗಡಿಗಳು ಇರುತ್ತವೆ ಅಂದರೆ ಸರಿ . ಕೃತ್ಯ ಸ್ಥಳದ ಪಂಚನಾಮೆಗೆ ಸಳದಲ್ಲಿದ್ದ ವ್ಯಕ್ತಿಗಳನ್ನೇ ಪಂಚರನ್ನಾಗಿ ನೇಮಿಸಲಾಗಿತ್ತು. ಚಾಸಾ-2 ಗೌಳೆರಹಟ್ಟಿಯವರು, ಚಾಸಾ -3 ಎಸ್ ಆರ್ ನಗರದವರು ಅಂದರೆ ಸರಿ . ಫೋಟೋಗಳನ್ನು ಯಾರು ತೆಗೆದರು ಎಂದು ನನಗೆ ನೆನಪಿಲ್ಲ. ಸದರಿ ಫೋಟೋಗಳನ್ನು ಠಾಣೆಯ ಕ್ಯಾಮೆರಾದಲ್ಲಿ ತೆಗೆಯಲಾಗಿದೆ. ನಮ್ಮ ಸಮಕ್ಷಮ ಸ್ಥಳದಲ್ಲಿ ಯಾವುದೇ ವಸ್ತುವನ್ನು ಜಪ್ತು ಪಡಿಸಿಕೊಂಡಿಲ್ಲ. ಕೃತ್ಯ ಸ್ಥಳದ ಪಂಚನಾಮೆಗೆ ನನ್ನ ಸಹಿ ಮತ್ತು ಚಾಸಾ -1 ರವರ ಸಹಿ ಇರುವುದಿಲ್ಲ ಅಂದರೆ ಸರಿ .

ಚಾಸಾ -1 ರವರು ನಮ್ಮ ಠಾಣೆಯ ಪೋಲಿಸ್ ಪೇದೆ ಆಗಿದ್ದರು ಅಂದರೆ ಸರಿ . ಚಾಸಾ -1 ರವರು ನೀಡಿದ್ದ ಸುಳ್ಳು ದೂರಿನ ಅನ್ವಯ ಠಾಣೆಯಲ್ಲಿಯೇ ಪಂಚನಾಮೆ ಮತ್ತು ಇತರೆ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಅಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.